Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**
ವಿಶೇಷ ಸಂಚಿಕೆ

| | |
|---|---|
| **भाग—IX** | **अनुभाग 1** |
| PART IX | SECTION 1 |
| ಭಾಗ IX | ವಿಭಾಗ 1 |

**प्राधिकार से प्रकाशित**
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ


| | | | |
|---|---|---|---|
| **सं—1** | **नई दिल्ली सोमवार, जून 17, 1985** | **जेष्ट—27 1907 (शक)** | **खन्ड—2** |
| No. 1 | New Delhi Monday, June 17, 1985 | Jaistha 27, 1907 (Saka) | Vol. 2 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಜೂನ್ ೧೭, ೧೯೮೫ | ಜ್ಯೇಷ್ಠ ೨೭, ೧೯೦೭ (ಶಕ) | ಸಂಪುಟ ೨ |


## MINISTRY OF LAW, AND JUSTICE

(Legislative Department)

New Delhi, February 27, 1985/Falguna 1906 (Sakha)

The translations in Kannada of the following namely—(1) The Two Members constituencies (Abolition) Act, 1961, (2) The Apprnticés Act, 1961 (3) The Haj Committee Act, 1959 (4) The Working Journalists (Fixation of Rates of Wages) Act, 1958 (5) The Indian Trust Act, 1882. are hereby published under the authority of the president and shall be deemed to be the authorised translations thereof in Kannada under clause (a) of Section 2 of the authorised Translations (central lwas) Act, 1973 (50 of 1973).

ಕೆಳಕಂಡ ಅಧಿನಿಯಮಗಳ ಎಂದರೆ, (೧) ದ್ವಿಸದಸ್ಯ ಚುನಾವಣಾ ಕ್ಷೇತ್ರಗಳ (ರದ್ದಿಯಾತಿ) ಅಧಿನಿಯಮ, ೧೯೬೧ ; (೨) ಉಮೇದುವಾರರ ಅಧಿನಿಯಮ, ೧೯೬೧ ; (೩) ಹಜ್ ಸಮಿತಿ ಅಧಿನಿಯಮ, ೧೯೫೯ ; (೪) ಕಾರ್ಯನಿರತ ಪತ್ರಿಕೋದ್ಯಮಿ (ಮಜೂರಿ ದರ ನಿಗದಿ) ಅಧಿನಿಯಮ ೧೯೫೮ ; (೫) ಭಾರತ ನ್ಯಾಸ ಅಧಿನಿಯಮ, ೧೮೮೨—ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ (ಕೇಂದ್ರ ಕಾನೂನುಗಳ) ಅಧಿನಿಯಮ, ೧೯೭೩ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ಹಜ್ ಸಮಿತಿ ಅಧಿನಿಯಮ, 1959

[ಜನವರಿ 1, 1985 ರಂದು ಜಾರಿಯಲ್ಲಿದ್ದಂತೆ] [ಡಿಸೆಂಬರ್ 17, 1959]

ಸೌದಿ ಅರೇಬಿಯಾ, ಸಿರಿಯಾ, ಇರಾಕ್, ಇರಾನ್ ಮತ್ತು ಜೋರ್ಡಾನ್‌ಗಳಿಗೆ ಹೋಗುವ ಮುಸ್ಲಿಮ್ ಯಾತ್ರಿಕರಿಗೆ ಸಹಾಯ ಮಾಡುವುದಕ್ಕಾಗಿ ಮುಂಬಯಿ ಬಂದರಿನಲ್ಲಿ ಒಂದು ಸಮಿತಿಯನ್ನು ಸ್ಥಾಪಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಅಧಿನಿಯಮ.

ಭಾರತ ಗಣರಾಜ್ಯದ ಹತ್ತನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:—

1. ಸಂಕ್ಷಿಪ್ತ ಹೆಸರು:— ಈ ಅಧಿನಿಯಮವನ್ನು ಹಜ್ ಸಮಿತಿ ಅಧಿನಿಯಮ, 1959 ಎಂದು ಕರೆಯತಕ್ಕದ್ದು.

2. ಪರಿಭಾಷೆಗಳು.— ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ, —

(ಕ) ''ಸಮಿತಿ'' ಎಂದರೆ, ಈ ಅಧಿನಿಯಮದ ಮೇರೆಗೆ ರಚಿತವಾದ ಹಜ್ ಸಮಿತಿ;

(ಖ) "ಯಾತ್ರಿಕ" ಎಂದರೆ, ಸೌದಿ ಅರೇಬಿಯಾ, ಸಿರಿಯಾ, ಇರಾಕ್, ಇರಾನ್ ಅಥವಾ ಜೋರ್ಡಾನ್‌ಗಳಿಗೆ ಯಾತ್ರೆಗೆ ಹೋಗುವ ಅಥವಾ ಅಲ್ಲಿಂದ ಹಿಂತಿರುಗುವ ಮುಸ್ಲಿಮ್;

(ಗ) ''ಯಾತ್ರಾ ಹಡಗು" ಎಂದರೆ, ಮುಂಬಯಿ ಬಂದರಿನಿಂದ ಅಥವಾ ಬಂದರಿಗೆ, ಅಥವಾ ಸೂಯೆಜ್‌ನ್ನು ಹೊರತುಪಡಿಸಿ ಕೆಂಪು ಸಮುದ್ರದಲ್ಲಿಯ ಯಾವುದೇ ಬಂದರಿಗೆ ಅಥವಾ ಬಂದರಿನಿಂದ ಯಾತ್ರಿಕರನ್ನು ಒಯ್ಯುವ ಅಥವಾ ಒಯ್ಯಲಿರುವ ಹಡಗು;

(ಘ) ''ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು.

3. ಹಜ್ ಸಮಿತಿಯ ನಿಗಮನ:— (1) ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಈ ಬಗ್ಗೆ ಗೊತ್ತುಪಡಿಸಬಹುದಾದ ದಿನಾಂಕದಿಂದ ಹಜ್ ಸಮಿತಿಯೆಂಬ ಹೆಸರಿನ ಒಂದು ಸಮಿತಿಯನ್ನು ಸ್ಥಾಪಿಸತಕ್ಕದ್ದು.

(2) ಸದರಿ ಸಮಿತಿಯು ನಿರಂತರ ಉತ್ತರಾಧಿಕಾರವುಳ್ಳ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಒಳಗಾಗತಕ್ಕದ್ದು.

4. ಸಮಿತಿಯ ರಚನೆ:—(1) ಸಮಿತಿಯು ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:—

(ಕ) ಸೀಮಾ ಸುಂಕ ಕಲೆಕ್ಟರ್, ಮುಂಬಯಿ, ಪದನಿಮಿತ್ತ;

(ಖ) ಅಧ್ಯಕ್ಷ, ಪೋರ್ಟ್ ಟ್ರಸ್ಟ್, ಮುಂಬಯಿ, ಪದನಿಮಿತ್ತ;

(ಗ) ಪ್ರಧಾನಾಧಿಕಾರಿ, ವಾಣಿಜ್ಯ ನೌಕಾ ಇಲಾಖೆ, ಮುಂಬಯಿ, ಪದನಿಮಿತ್ತ;

(ಘ) ಬೃಹತ್ ಮುಂಬಯಿ ಪೋಲಿಸ್ ಕಮೀಷನರು, ಪದನಿಮಿತ್ತ;

(ಙ) ಮುನ್ಸಿಪಲ್ ಕಮಿಷನರು, ಬೃಹತ್ ಮುಂಬಯಿ, ಪದನಿಮಿತ್ತ;

(ಚ) ಬಂದರು ಆರೋಗ್ಯಾಧಿಕಾರಿ, ಮುಂಬಯಿ, ಪದನಿಮಿತ್ತ;

(ಛ) ಕೇಂದ್ರ ಸರ್ಕಾರವು ನಾಮನಿರ್ದೇಶಿಸಬೇಕಾದ ಇಬ್ಬರು ಸದಸ್ಯರು;

(ಜ) ಮೂವರು ಸಂಸತ್ ಸದಸ್ಯರು, ಅವರಲ್ಲಿ ಲೋಕಸಭೆಯ ಸದಸ್ಯರ ಪೈಕಿ ಲೋಕಸಭಾಧ್ಯಕ್ಷನು, ನಾಮನಿರ್ದೇಶಿಸಬೇಕಾದ ಇಬ್ಬರು ಮತ್ತು ರಾಜ್ಯ ಸಭೆಯ ಸದಸ್ಯರ ಪೈಕಿ ರಾಜ್ಯಸಭಾಧ್ಯಕ್ಷನು ನಾಮನಿರ್ದೇಶಿಸಬೇಕಾದ ಒಬ್ಬನು;

(ಝ) ಮುಂಬಯಿ ರಾಜ್ಯ ಸರ್ಕಾರವನ್ನು ಪ್ರತಿನಿಧಿಸುವುದಕ್ಕಾಗಿ ಆ ಸರ್ಕಾರವು ನಾಮನಿರ್ದೇಶಿಸಬೇಕಾದ ಒಬ್ಬ ಸದಸ್ಯ;

(ಞ) ಮುಂಬಯಿ ವಿಧಾನ ಸಭೆಯ ಅಧ್ಯಕ್ಷನು ನಾಮನಿರ್ದೇಶಿಸಬೇಕಾದ ಆ ಸಭೆಯ ಇಬ್ಬರು ಸದಸ್ಯರು;

(ಟ) ಬೃಹತ್ ಮುಂಬಯಿಯ ಪೌರ ನಿಗಮದ ಮುಸ್ಲಿಮ್ ಸದಸ್ಯರ ಶಿಫಾರಸ್ಸಿನ ಮೇರೆಗೆ ಮುಂಬಯಿ ರಾಜ್ಯ ಸರ್ಕಾರವು ನಾಮನಿರ್ದೇಶಿಸಬೇಕಾದ ಬೃಹತ್ ಮುಂಬಯಿಯ ಪೌರ ನಿಗಮದ ಇಬ್ಬರು ಸದಸ್ಯರು;

(ಠ) ಸಮಿತಿಯ ಎಲ್ಲ ಸದಸ್ಯರು, ತಮ್ಮ ಅಭಿಪ್ರಾಯದಲ್ಲಿ ಯಾತ್ರಿಕರ ಕಲ್ಯಾಣದಲ್ಲಿ ನೇರವಾಗಿ ಮತ್ತು ಸಕ್ರಿಯವಾಗಿ ಹಿತಾಸಕ್ತಿಯಿದ್ದು ಅಂಥ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದಕ್ಕಾಗಿ ಸಹಯೋಜಿಸಬೇಕಾದ ಮೂವರು ಸದಸ್ಯರು, ಆ ಮೂವರಲ್ಲಿ ಇಬ್ಬರು ಷಿಯಾ ಮುಸ್ಲಿಮ್‌ರಾಗಿರತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಪ್ರತಿಯೊಂದು ನಾಮನಿರ್ದೇಶನವು ಕೇಂದ್ರ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸಿದ ಕೂಡಲೇ ಪರಿಣಾಮಕಾರಿಯಾಗತಕ್ಕದ್ದು.

5. ಸದಸ್ಯರನ್ನು ನಾಮನಿರ್ದೇಶಿಸುವುದು ಮತ್ತು ಸಹಯೋಜಿಸುವುದು:—(1)ಸಮಿತಿಯ ಸದಸ್ಯರನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ನಾಮ ನಿರ್ದೇಶಿಸತಕ್ಕದ್ದು ಅಥವಾ ಜೊತೆಗೆ ಸೇರಿಸಿಕೊಳ್ಳತಕ್ಕದ್ದು.

(2) ಸಮಿತಿಯ ಸದಸ್ಯರ ನಾಮನಿರ್ದೇಶನವಾದ ಅನಂತರ ಮತ್ತು 4ನೇ ಪ್ರಕರಣದ (1)ನೇ ಉಪಪ್ರಕರಣದ (ಠ) ಖಂಡದಲ್ಲಿ ಉಲ್ಲೇಖಿತರಾದ ಸದಸ್ಯರನ್ನು ಸಹಯೋಜಿಸಿಕೊಂಡ ಕೂಡಲೇ ನಾಮನಿರ್ದೇಶಿತರಾದ ಮತ್ತು ಸಹಯೋಜಿತರಾದ ಎಲ್ಲ ಸದಸ್ಯರ ಹೆಸರುಗಳ ಪಟ್ಟಿಯನ್ನು ಕೇಂದ್ರ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು:

ಪರಂತು, ಸದಸ್ಯರನ್ನು ಸಹಯೋಜಿಸಿಕೊಳ್ಳುವಲ್ಲಿನ ವಿಫಲತೆಯು ನಾಮನಿರ್ದೇಶನಗಳನ್ನು ಮಾಡುವುದಕ್ಕೆ ಅಥವಾ ಈ ಉಪಪ್ರಕರಣದಲ್ಲಿ ಉಪಬಂಧಿಸಿರುವಂತೆ ಸದಸ್ಯರ ಪಟ್ಟಿಯನ್ನು ಪ್ರಕಟಿಸುವುದಕ್ಕೆ ಕೇಂದ್ರ ಸರ್ಕಾರವನ್ನು ಪ್ರತಿಬಂಧಿಸತಕ್ಕದ್ದಲ್ಲ:

ಮತ್ತೂ ಪರಂತು, ಹೊಸ ಸಮಿತಿಯ ಸದಸ್ಯರ ಪಟ್ಟಿಯನ್ನು ಯಾವ ಸಮಿತಿಯ ಸ್ಥಾನಕ್ಕೆ ಅದು ಬರುತ್ತಿದೆಯೋ ಆ ಸಮಿತಿಯ ಸದಸ್ಯರ ಪಟ್ಟಿಯ ಪ್ರಕಟವಾದ ದಿನಾಂಕದಿಂದ ಮೂರು ವರ್ಷಗಳು ಮುಕ್ತಾಯವಾಗುವ ಮುಂಚೆ ಪ್ರಕಟಿಸತಕ್ಕದ್ದಲ್ಲ.

6. ಅಧ್ಯಕ್ಷ ಮತ್ತು ಉಪಾಧ್ಯಕ್ಷರು:—(1) 5ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಸಮಿತಿಯ ಸದಸ್ಯರ ಪಟ್ಟಿಯನ್ನು ಪ್ರಕಟಿಸಿದ ಅನಂತರ, ಕೇಂದ್ರ ಸರ್ಕಾರವು ತನ್ನ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ, ಆ ಸದಸ್ಯರ ಪೈಕಿ ಒಬ್ಬನನ್ನು ಅಧ್ಯಕ್ಷನನ್ನಾಗಿ ಆಯ್ಕೆ ಮಾಡತಕ್ಕದೆಂದು ಸಮಿತಿಗೆ ನಿರ್ದೇಶಿಸತಕ್ಕದ್ದು.

(2) ಹಾಗೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಧ್ಯಕ್ಷನನ್ನು ಆಯ್ಕೆ ಮಾಡಲು ಸಮಿತಿಯು ವಿಫಲವಾದರೆ ಸಮಿತಿಯ ಸದಸ್ಯನೊಬ್ಬನನ್ನು ಅದರ ಅಧ್ಯಕ್ಷನನ್ನಾಗಿ ಕೇಂದ್ರ ಸರ್ಕಾರವು ನೇಮಿಸಬಹುದು.

(3) ನಿಯಮಿಸಬಹುದಾದಂಥ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಅಧ್ಯಕ್ಷನು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(4) ಸಮಿತಿಯು ತನ್ನ ಸದಸ್ಯರ ಪೈಕಿ ಇಬ್ಬರಿಗಿಂತ ಹೆಚ್ಚಿರದ ಸದಸ್ಯರನ್ನು ಉಪಾಧ್ಯಕ್ಷರನ್ನಾಗಿ ಚುನಾಯಿಸತಕ್ಕದ್ದು. ಅವರು ಸಮಿತಿಯು ಈ ಬಗ್ಗೆ ರಚಿಸಿದ ಉಪವಿಧಿಗಳ ಮೂಲಕ ನಿರ್ಧರಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(5) ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ನೇಮಕವನ್ನು ಅಥವಾ ಚುನಾವಣೆಯನ್ನು ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸತಕ್ಕದ್ದು.

7. ಪದಾವಧಿ:— ಸಮಿತಿಯ ಸದಸ್ಯರ ಪದಾವಧಿಯು (ಪದನಿಮಿತ್ತ ಸದಸ್ಯರನ್ನು ಮತ್ತು ಆಕಸ್ಮಿಕ ಖಾಲಿಸ್ಥಾನಗಳಿಗೆ ತುಂಬಲಾದ ಸದಸ್ಯರನ್ನು ಹೊರತುಪಡಿಸಿ) 5ನೆಯ ಪ್ರಕರಣದ (2)ನೆಯ ಉಪ-ಪ್ರಕರಣದ ಮೇರೆಗೆ ಸದಸ್ಯರ ಪಟ್ಟಿಯು ಪ್ರಕಟಿತವಾದ ದಿನಾಂಕದ ಮರುದಿವಸದಿಂದ ಪ್ರಾರಂಭವಾಗುವ ದಿನಾಂಕದಿಂದ ಮತ್ತು ಮುಂದಿನ ಸಮಿತಿಯ ಸದಸ್ಯರ ಪಟ್ಟಿಯು ಪ್ರಕಟಿತವಾಗುವ ದಿನಾಂಕದಂದು ಮುಕ್ತಾಯವಾಗುವ ದಿನಾಂಕದವರೆಗೆ ಮೂರು ವರ್ಷಗಳಿಗಿಂತ ಕಡಿಮೆಯಾಗಿರತಕ್ಕದ್ದಲ್ಲ.

8. ಹೊಸ ಸಮಿತಿಗಳ ರಚನೆ:— (1) 5ನೆಯ ಪ್ರಕರಣದ (2)ನೆಯ ಉಪ-ಪ್ರಕರಣದ ಮೇರೆಗೆ ಸಮಿತಿಯ ಸದಸ್ಯರ ಪಟ್ಟಿಯು ಪ್ರಕಟವಾದ ಅನಂತರ ಮೂರು ವರ್ಷಗಳ ಅವಧಿಯು ಮುಕ್ತಾಯವಾಗುವ ಮುಂಚೆ ಅಥವಾ ಅದರ ಅನಂತರ ಕೇಂದ್ರ ಸರ್ಕಾರವು ವಿಹಿತವೆಂದು ಭಾವಿಸಬಹುದಾದಂಥ ಕಾಲದಲ್ಲಿ, ಹೊಸ ಸಮಿತಿಯ ಸದಸ್ಯರ ನಾಮನಿರ್ದೇಶನಕ್ಕಾಗಿ ಮತ್ತು ಸಹಯೋಜನೆಗಾಗಿ ಅವಶ್ಯವಾದ ಎಲ್ಲ ಕ್ರಮಗಳನ್ನು ಕೇಂದ್ರಸರ್ಕಾರವು ಕೈಗೊಳ್ಳತಕ್ಕದ್ದು ಅಥವಾ ಕೈಗೊಳ್ಳುವಂತೆ ಮಾಡತಕ್ಕದ್ದು.

(2) ಸಮಿತಿಯ ಸದಸ್ಯನಾಗಿರುವ ಅಥವಾ ಸದಸ್ಯನಾಗಿದ್ದ ಕಾರಣದಿಂದಾಗಿ ಯಾವನೇ ವ್ಯಕ್ತಿಯು ಹೊಸ ಸಮಿತಿಗೆ ನಾಮನಿರ್ದೇಶನಗೊಳ್ಳಲು ಅಥವಾ ಸಹಯೋಜಿತಗೊಳ್ಳಲು ಅನರ್ಹನಾಗತಕ್ಕದ್ದಲ್ಲ.

9. ಸಮಿತಿಯ ಕರ್ತವ್ಯಗಳು:— (1) ಸಮಿತಿಯ ಕರ್ತವ್ಯಗಳು ಕೆಳಕಂಡಂತೆ ಇರತಕ್ಕದ್ದು;

(ಕ) ಯಾತ್ರಿಕರಿಗೆ ಉಪಯುಕ್ತವಾಗುವ ಮಾಹಿತಿಯನ್ನು ಸಂಗ್ರಹಿಸುವುದು ಮತ್ತು ಪ್ರಸಾರ ಮಾಡುವುದು;

(ಖ) ಯಾತ್ರೆಗೆ ಹೋಗುವಾಗ ಅಥವಾ ಯಾತ್ರೆಯಿಂದ ಹಿಂದಿರುಗುವಾಗ ನಗರದಲ್ಲಿ ಮತ್ತು ಮುಂಬಯಿ ಬಂದರಿನಲ್ಲಿ ಯಾತ್ರಿಕರು ತಂಗುವ ಅವಧಿಯಲ್ಲಿ ದೇವಿ ಹಾಕುವುದು, ರೋಗ ನಿರೋಧಕ ಚುಚ್ಚುಮದ್ದು ಹಾಕುವುದು, ವೈದ್ಯಕೀಯ ಪರೀಕ್ಷೆ ಮಾಡುವುದು ಮತ್ತು ಪಾಸುಗಳನ್ನು ಮತ್ತು ರಹದಾರಿಗಳನ್ನು ಕೊಡುವುದಕ್ಕೆ ಒಳಗೊಂಡಂತೆ ಎಲ್ಲ ವಿಷಯಗಳಲ್ಲಿ ಯಾತ್ರಿಕರಿಗೆ ಸಲಹೆ ಕೊಡುವುದು ಮತ್ತು ಸಹಾಯ ಮಾಡುವುದು, ಮತ್ತು ಅಂಥ ವಿಷಯಗಳಲ್ಲಿ ಸ್ಥಳೀಯ ಪ್ರಾಧಿಕಾರಿಗಳೊಂದಿಗೆ ಸಹಕರಿಸುವುದು;

(ಗ) ನಿರ್ಧನಿಕ ಯಾತ್ರಿಕರಿಗೆ ಪರಿಹಾರವನ್ನು ಒದಗಿಸುವುದು,

(ಘ) ಯಾತ್ರಿಕರಿಗೆ ಪ್ರಯಾಣ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ರೈಲ್ವೆ, ಹಡಗು ಕಂಪನಿಗಳು, ವಿಮಾನ ಸಂಸ್ಥೆಗಳು ಮತ್ತು ಪ್ರಯಾಣ ಸಂಸ್ಥೆಗಳೊಂದಿಗೆ ವ್ಯವಹರಿಸುವುದು ಮತ್ತು ಸಹಕರಿಸುವುದು;

(ಙ) ಹಡಗು ಕಂಪನಿಯವರು ಯಾತ್ರಾ ಹಡಗುಗಳಲ್ಲಿ ನಿಯೋಜಿಸಿಕೊಳ್ಳುವುದಕ್ಕಾಗಿ ಸೂಕ್ತ ಮಾರ್ಗದರ್ಶಕರನ್ನು ಹುಡುಕಿಕೊಡುವುದು;

(ಚ) ಯಾತ್ರಿಕರ ಕುಂದುಕೊರತೆಗಳನ್ನು ಮತ್ತು ಭಾರತೀಯ ವ್ಯಾಪಾರಿ ಹಡಗು ಸಾಗಣೆ ಅಧಿನಿಯಮ, 1923(1923ರ 21)ರ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ಯಾತ್ರಿಕ ಹಡಗಿನ ಯಜಮಾನನ ಅಥವಾ ಒಡೆಯನ ಯಾವುವೇ ಉಲ್ಲಂಘನೆಗಳನ್ನು ಅಥವಾ ಲೋಪಗಳನ್ನು ಸಂಬಂಧಪಟ್ಟ ಪ್ರಾಧಿಕಾರಗಳ ಗಮನಕ್ಕೆ ತರುವುದು ಮತ್ತು ಪರಿಹಾರೋಪಾಯಗಳನ್ನು ಸೂಚಿಸುವುದು:

(ಛ) ಹಡಗಿನ ಯಜಮಾನನಿಗೆ ಅಥವಾ ಒಡೆಯನಿಗೆ ಯಾತ್ರಿಕರ ಕುಂದುಕೊರತೆಗಳನ್ನು ತಿಳಿಸುವ ಬಗ್ಗೆ ಯಾತ್ರಾ ಹಡಗಿನಲ್ಲಿ ''ಅಮಿರುಲ್ ಹಜ್'' ಎಂದು ಒಬ್ಬ ಯಾತ್ರಿಕನನ್ನು ನೇಮಿಸುವುದು.

(ಜ) ಸಾಮಾನ್ಯವಾಗಿ ಯಾತ್ರಿಕರ ಯೋಗಕ್ಷೇಮವನ್ನು ನೋಡಿಕೊಳ್ಳುವುದು; ಮತ್ತು

(ಝ) ಯಾತ್ರಿಕ ಸಂಚಾರಕ್ಕೆ ಸಂಬಂಧಿಸಿ ನಿಯಮಿಸಬಹುದಾದಂಥ ಇತರ ಕರ್ತವ್ಯಗಳನ್ನು ನಿರ್ವಹಿಸುವುದು;

(2) ಈ ಪ್ರಕರಣದ ಮೂಲಕ ವಿಧಿಸಲಾದ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಕೇಂದ್ರ ಸರ್ಕಾರವು ಸಮಿತಿಗೆ ಎಲ್ಲ ಯುಕ್ತ ಸಹಾಯವನ್ನು ಕೊಡತಕ್ಕದ್ದು.

10. ಸಮಿತಿಯ ಸಭೆಗಳು:— (1) ಹಜ್ ದಿವಸಕ್ಕೆ ಮುಂಚೆ 4 ತಿಂಗಳ ಅವಧಿಯಲ್ಲಿ ಮತ್ತು ಹಜ್ ದಿವಸದ ಅನಂತರ ಎರಡು ತಿಂಗಳುಗಳ ಅವಧಿಯಲ್ಲಿ ಪ್ರತಿ ತಿಂಗಳು ಕೊನೆಯ ಪಕ್ಷ ಒಂದು ಸಲ ಮತ್ತು ವರ್ಷದ ಉಳಿದ ಅವಧಿಯಲ್ಲಿ ಮೂರು ತಿಂಗಳಿಗೆ ಕೊನೇ ಪಕ್ಷ ಒಂದು ಸಲ ಸಮಿತಿಯ ಸಭೆ ಸೇರತಕ್ಕದ್ದು.

(2) ಯಾವುದೇ ಸಭೆಯಲ್ಲಿ ಕೋರಂಗೆ ಅಗತ್ಯವಿರುವ ಸದಸ್ಯರ ಸಂಖ್ಯೆ ಆರು ಆಗಿರತಕ್ಕದ್ದು.

(3) ಹಾಜರಿರುವ ಸದಸ್ಯರ ಬಹುಮತಗಳ ಮೂಲಕ ಎಲ್ಲ ವಿಷಯಗಳನ್ನು ತೀರ್ಮಾನಿಸತಕ್ಕದ್ದು, ಮತ್ತು ಮತಗಳು ಸಮವಾಗಿ ಇರುವ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅಧ್ಯಕ್ಷತೆ ವಹಿಸಿರುವ ಇತರ ವ್ಯಕ್ತಿಯು ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

11. ಖಾಲಿ ಸ್ಥಾನಗಳು, ಇತ್ಯಾದಿಗಳು ಸಮಿತಿಯ ಕಾರ್ಯಗಳನ್ನು ಅಥವಾ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕದ್ದಲ್ಲ:— ಸಮಿತಿಯ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು ಅದರ ಸದಸ್ಯರಲ್ಲಿ ಯಾವುದೇ ಖಾಲಿ ಸ್ಥಾನ ಇರುವ ಅಥವಾ ಅದರ ರಚನೆಯಲ್ಲಿ ಯಾವುದೇ ನ್ಯೂನತೆ ಇರುವ ಕಾರಣಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

12. ನಿರ್ವಹಣಾಧಿಕಾರಿ ಮತ್ತು ಇತರ ನಿಯೋಜಿತರು:— (1) ಕೇಂದ್ರ ಸರ್ಕಾರವು, ಸಮಿತಿಯೊಡನೆ ಸಮಾಲೋಚಿಸಿ, ಒಬ್ಬ ವ್ಯಕ್ತಿಯನ್ನು ಅದರ ನಿರ್ವಹಣಾಧಿಕಾರಿಯನ್ನಾಗಿ ನೇಮಿಸತಕ್ಕದು ಮತ್ತು ಅವನು ಆ ಸಮಿತಿಯ ಕಾರ್ಯದರ್ಶಿಯೂ ಆಗಿರತಕ್ಕದು.

(2) ಈ ಅಧಿನಿಯಮದ ಮೇರೆಗಿನ ತನ್ನ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಅವಶ್ಯವೆಂದು ತಾನು ಪರ್ಯಾಲೋಚಿಸಬಹುದಾದಂಥ ಇತರ ನಿಯೋಜಿತರನ್ನು ಕೇಂದ್ರ ಸರ್ಕಾರದ ಅನುಮೋದನೆಗೆ ಒಳಪಟ್ಟು, ಸಮಿತಿಯು ನೇಮಿಸಿಕೊಳ್ಳತಕ್ಕದು.

13. ಉಪಸಮಿತಿಗಳು ಮತ್ತು ಯಾತ್ರಾ ಹಡಗುಗಳ ಪರಿಶೀಲನೆ:— (1) ಯಾತ್ರಾ ಹಡಗುಗಳನ್ನು ಪರಿಶೀಲಿಸುವುದಕ್ಕಾಗಿ ತಾನು ಸೂಕ್ತವೆಂದು ಆಲೋಚಿಸುವಷ್ಟು ಸಂಖ್ಯೆಯ ತನ್ನ ಸದಸ್ಯರನ್ನು ಒಳಗೊಂಡ ಒಂದು ಅಥವಾ ಹೆಚ್ಚು ಉಪಸಮಿತಿಗಳನ್ನು ಸಮಿತಿಯು ನೇಮಿಸತಕ್ಕದು.

(2) ಅಂಥ ಯಾವುದೇ ಉಪಸಮಿತಿಯು ಯಾತ್ರಾ ಹಡಗನ್ನು ಪರಿಶೀಲಿಸುವಾಗ, ಭಾರತ ವ್ಯಾಪಾರಿ ಹಡಗು ಸಾಗಾಣೆ ಅಧಿನಿಯಮ, 1923(1923ರ 21) 151ನೇ ಪ್ರಕರಣದ ಮೇರೆಗೆ ಬಂದರಿಗಾಗಿ ನೇಮಿತನಾಗಿರುವ ಪ್ರಮಾಣೀಕರಿಸುವ ಅಧಿಕಾರಿಯು, ಹಡಗಿನ ಸಮೀಕ್ಷಕನು ಅಥವಾ ಪ್ರಮಾಣೀಕರಿಸುವ ಅಧಿಕಾರಿಯು ನಿಯೋಗಿಸುವ ಇತರ ವ್ಯಕ್ತಿಯು ಅದರ ಜೊತೆಗೆ ಇರತಕ್ಕದು.

(3) ಸಮಿತಿಯ ನಿರ್ವಹಣಾಧಿಕಾರಿಯು, ಅಥವಾ (1)ನೇ ಉಪ-ಪ್ರಕರಣದ ಮೇರೆಗೆ ನೇಮಿತವಾದ ಉಪಸಮಿತಿಯು, ಮುಂಬಯಿ ಬಂದರಿನಿಂದ ಪ್ರಯಾಣ ಮಾಡುವುದಾಗಿ ಜಾಹಿರಾತು ಮಾಡಿರುವ ಅಥವಾ ಪ್ರಯಾಣ ಮಾಡುವುದಾಗಿ ತಿಳಿಸಿರುವ, ಅಥವಾ ಮುಂಬಯಿ ಬಂದರಿಗೆ ವಾಪಸ್ಸು ಬಂದಿರುವ ಯಾವುದೇ ಯಾತ್ರಾ ಹಡಗನ್ನು ಪ್ರವೇಶಿಸಬಹುದು ಮತ್ತು ಪರಿಶೀಲಿಸಬಹುದು.

(4) ಅಂಥ ಪರಿಶೀಲನೆಗಾಗಿ ಯುಕ್ತ ಸೌಲಭ್ಯಗಳನ್ನು ಒದಗಿಸಲು ತಪ್ಪಿದ ಯಾತ್ರಾ ಹಡಗಿನ ಯಜಮಾನನು ಅಥವಾ ಯಾವನೇ ಅಧಿಕಾರಿಯು ಐನೂರು ರೂಪಾಯಿಗಳ ವರೆಗೆ ಜುಲ್ಮಾನೆಯಿಂದ ದಂಡನೀಯವಾಗತಕ್ಕದು.

(5) ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಅಥವಾ ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟ್ ಅಲ್ಲದ ಇತರ ಯಾವನೇ ಮ್ಯಾಜಿಸ್ಟ್ರೇಟನು (4)ನೇ ಉಪ-ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ, ಮತ್ತು ಅಂಥ ಮ್ಯಾಜಿಸ್ಟ್ರೇಟನು ಅಂಥ ಅಪರಾಧದ ಸಂಜ್ಞಾನವನ್ನು ಸಮಿತಿಯಅಧ್ಯಕ್ಷನ ಲಿಖಿತ ದೂರಿನ ಮೇಲೆ ಮಾತ್ರ ತೆಗೆದುಕೊಳ್ಳತಕ್ಕದು.

(6) ಸಮಿತಿಯು ತಾನು ಸೂಕ್ತವೆಂದು ಆಲೋಚಿಸಬಹುದಾದಂಥ ಉದ್ದೇಶಗಳಿಗಾಗಿ ಇತರ ಉಪಸಮಿತಿಗಳನ್ನು ಸಹ ನೇಮಿಸಬಹುದು ಮತ್ತು ಅಂಥ ಯಾವುದೇ ಉಪಸಮಿತಿಯು, ಸಮಿತಿಯು ಈ ಬಗ್ಗೆ ಮಾಡಿದ ಉಪವಿಧಿಗಳ ಮೂಲಕ ನಿರ್ಧರಿಸಬಹುದಾದಷ್ಟು ಸಂಖ್ಯೆಯ ಸದಸ್ಯರನ್ನು ಮತ್ತು ಇತರ ವ್ಯಕ್ತಿಗಳನ್ನು ಒಳಗೊಳ್ಳತಕ್ಕದು

14. ಹಜ್ ನಿಧಿ:— ಹಜ್ ನಿಧಿಯೆಂದು ಕರೆಯಲಾಗುವ ತನ್ನದೇ ಆದ ನಿಧಿಯನ್ನು ಸಮಿತಿಯು ಹೊಂದಿರತಕ್ಕದು, ಮತ್ತು ಕೆಳಕಂಡ ಮೊತ್ತಗಳನ್ನು ಅದಕ್ಕೆ ಜಮಾ ಮಾಡತಕ್ಕದು, ಎಂದರೆ:—

(ಕ) ಭಾರತ ವ್ಯಾಪಾರಿ ಹಡಗು ಸಾಗಣೆ ಅಧಿನಿಯಮ, 1923 (1923ರ 21)ರ 208ಕ ಪ್ರಕರಣದ (ಖ) ಖಂಡದ ಮೇರೆಗೆ ಯಾತ್ರಿಕರು ಇಟ್ಟ ಎಲ್ಲ ಠೇವಣಿಗಳ ಮೇಲಿನ ಬಡ್ಡಿ;

(ಖ) ಭಾರತ ವ್ಯಾಪಾರಿ ಹಡಗು ಸಾಗಣೆ ಅಧಿನಿಯಮ, 1923ರ (1923ರ 21)ರ 213ನೇ ಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ನಿಯಮಕ್ಕೆ ಅನುಗುಣವಾಗಿ ಯಾತ್ರಿಕರ ಪಾಸುಗಳ ನೋಂದಣಿಗಾಗಿ ವಿಧಿಸಲಾದ ಫೀಜುಗಳು;

(ಗ) ಯಾರೂ ಕ್ಲೇಮು ಮಾಡಿರದ ಮತ್ತು ಸರ್ಕಾರಕ್ಕೆ ಸೇರಿಹೋದ, ಮೃತ ಯಾತ್ರಿಕರ ಚರಸ್ವತ್ತುಗಳ ಮಾರಾಟದಿಂದ ಬಂದ ಮೊತ್ತಗಳು ಮತ್ತು ಮೃತ ಯಾತ್ರಿಕರು ಬಿಟ್ಟು ಹೋದ ಹಣದ ಮೊತ್ತಗಳು;

(ಘ) ಯಾತ್ರಾ ಹಡಗಿನ ಮೇಲೆ ಹೋಗಲು ಇಚ್ಛಿಸುವ ಯಾತ್ರಿಕರ ಸ್ನೇಹಿತರಿಗೆ ಮತ್ತು ಬಂಧುಗಳಿಗೆ ಸಂದರ್ಶಕರ ಪಾಸುಗಳನ್ನು ಕೊಡಲು ವಿಧಿಸಬಹುದಾದ ಯಾವುವೇ ಫೀಜುಗಳು;

(ಙ) ಈ ಅಧಿನಿಯಮದ ಪ್ರಾರಂಭದಲ್ಲಿ ನಿರ್ಧನಿಕ ಯಾತ್ರಿಕರ ನಿಧಿ ಎಂದು ಹೇಳಲಾಗುವ ನಿಧಿಯ ಜಮೆಯಲ್ಲಿ ಇರುವ ಮೊಬಲಗು; ಪರಂತು, ನಿರ್ಧನಿಕ ಯಾತ್ರಿಕರ ಪರಿಹಾರಕ್ಕಾಗಿ ಮಾತ್ರವೇ ಅಂತಹ ಮೊಬಲಗನ್ನು ಸಮಿತಿಯು ವಿನಿಯೋಗಿಸತಕ್ಕದು;

(ಚ) ಖಾಸಗಿ ಮೂಲಗಳಿಂದ ಹಜ್ ನಿಧಿಗೆ ಬಂದ ಯಾವುವೇ ಮೊತ್ತಗಳು; ಮತ್ತು

(ಛ) ಕೇಂದ್ರ ಸರ್ಕಾರವು ಅಥವಾ ಯಾವುದೇ ರಾಜ್ಯ ಸರ್ಕಾರವು ಹಜ್ ನಿಧಿಗಾಗಿ ಕೊಟ್ಟ ಯಾವುವೇ ಮೊತ್ತಗಳು.

15. ಸ್ವತ್ತನ್ನು ಸಮಿತಿಯಲ್ಲಿ ನಿಹಿತಗೊಳಿಸುವುದು:— ಈ ಅಧಿನಿಯಮದ ಮೇರೆಗೆ ಸಮಿತಿಯು ಸ್ಥಾಪನೆಯಾಗುವುದಕ್ಕಿಂತ ಮುಂಚೆ, ಬಂದರು ಹಜ್ ಸಮಿತಿಗಳ ಅಧಿನಿಯಮ, 1932 (1932ರ 20)ರ ಮೇರೆಗೆ ರಚಿಸಲಾದ ಕಲ್ಕತ್ತೆಯ ಬಂದರು ಹಜ್ ಸಮಿತಿಯು ಮತ್ತು ಮುಂಬಯಿಯ ಬಂದರು ಹಜ್ ಸಮಿತಿಯು ಒಡೆತನವನ್ನು ಹೊಂದಿದ್ದ ಅಥವಾ ಅರ್ಜಿಸಿದ್ದ ಎಲ್ಲ ಸ್ವತ್ತು, ಆಸ್ತಿಗಳು ಮತ್ತು ನಿಧಿಗಳು, ಈ ಸಮಿತಿಯ ಸ್ಥಾಪನೆಯ ಅನಂತರ, ಸಮಿತಿಯಲ್ಲಿ ನಿಹಿತವಾಗತಕ್ಕದು ಮತ್ತು ಅವು 14ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಹಜ್ ನಿಧಿಯ ಒಂದು ಭಾಗವಾಗಿರತಕ್ಕದು.

16. ಹಜ್ ನಿಧಿಯ ವಿನಿಯೋಗ:— ಈ ಅಧಿನಿಯಮದ ಮೇರೆಗೆ ರಚಿಸಬಹುದಾದ ಯಾವುವೇ ನಿಯಮಗಳಿಗೆ ಒಳಪಟ್ಟು, ಹಜ್ ನಿಧಿಯು ಸಮಿತಿಯ ನಿಯಂತ್ರಣದಲ್ಲಿ ಮತ್ತು ನಿರ್ವಹಣೆಯಲ್ಲಿ ಇರತಕ್ಕದು, ಮತ್ತು ಕೆಳಕಂಡ ಉದ್ದೇಶಗಳಿಗಾಗಿ ವಿನಿಯೋಗವಾಗತಕ್ಕದು, ಎಂದರೆ:—

(ಕ) ಸಮಿತಿಯ ನಿರ್ವಹಣಾ ಅಧಿಕಾರಿಯ ಮತ್ತು ಇತರ ನಿಯೋಜಿತರ ವೇತನ ಮತ್ತು ಭತ್ಯಗಳು;

(ಖ) 9ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಉದ್ದೇಶಗಳಿಗೆ ಪ್ರಾಸಂಗಿಕವಾದ ಖರ್ಚುಗಳ ಮತ್ತು ವೆಚ್ಚಗಳ ಸಂದಾಯ;

(ಗ) 17ನೇ ಪ್ರಕರಣದ ಮೇರೆಗೆ ರಚಿಸಲಾದ ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದ ಇತರ ಯಾವುದೇ ಉದ್ದೇಶ.

17. ನಿಯಮ ರಚನಾಧಿಕಾರ:— (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರವು, ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಭಾಧೆ ಬಾರದಂತೆ, ಅಂಥ ನಿಯಮಗಳು ಕೆಳಕಂಡ ವಿಷಯಗಳಲ್ಲಿ ಎಲ್ಲವುಗಳಿಗೆ ಅಥವಾ ಯಾವುದಕ್ಕಾದರೂ ಉಪಬಂಧವನ್ನು ಕಲ್ಪಿಸಬಹುದು, ಎಂದರೆ:—

(ಕ) ಸಮಿತಿಯ ಸದಸ್ಯರ ನಾಮ ನಿರ್ದೇಶನ ಮತ್ತು ಸಹಯೋಜನೆ ಮಾಡುವ ರೀತಿ;
(ಖ) ಸಮಿತಿಯ ಸದಸ್ಯರಾಗಿ ಆಯ್ಕೆಗೊಳ್ಳಲು, ಅಥವಾ ಸದಸ್ಯರಾಗಿ ಇರಲು ಅನರ್ಹತೆಗಳು;
(ಗ) ಸದಸ್ಯರ ಸಹಯೋಜನೆಗೆ ಸಂಬಂಧಿಸಿದ ಸಂದೇಹಗಳನ್ನು ಮತ್ತು ವಿವಾದಗಳನ್ನು ನಿರ್ಧರಿಸಬಹುದಾದ ರೀತಿ;
(ಘ) ಸಮಿತಿಯ ಅಧ್ಯಕ್ಷನ ಮತ್ತು ಇತರ ಸದಸ್ಯರ ಪದದಲ್ಲಿ ಉಂಟಾದ ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿಮಾಡುವುದು;
(ಙ) ಸಮಿತಿಯ ಅಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು ತೆಗೆದುಹಾಕುವುದು ಮತ್ತು ಪದಕ್ಕೆ ಅವರ ರಾಜೀನಾಮೆ;
(ಚ) ಅಧ್ಯಕ್ಷನ ಪದಾವಧಿ ಮತ್ತು ಅವನ ಅಧಿಕಾರಗಳು ಹಾಗೂ ಕರ್ತವ್ಯಗಳು;
(ಛ) ಸಮಿತಿಗೆ ವಹಿಸಿಕೊಡಬಹುದಾದ ಕರ್ತವ್ಯಗಳು;
(ಜ) ನಿರ್ವಹಣಾಧಿಕಾರಿಯ ಅಧಿಕಾರಗಳು ಹಾಗು ಕರ್ತವ್ಯಗಳು ಮತ್ತು ನಿರ್ವಹಣಾಧಿಕಾರಿಯ ಹಾಗೂ ಸಮಿತಿಯ ಇತರ ನಿಯೋಜಿತರ ಸೇವಾ ಷರತ್ತುಗಳು;
(ಝ) ಹಜ್ ನಿಧಿಯ ಅಭಿರಕ್ಷೆ ಮತ್ತು ಅದರ ಶಿಲ್ಕುಗಳ ಹೂಡಿಕೆ;
(ಞ) ಹಜ್ ನಿಧಿಯನ್ನು ಯಾವ ಉದ್ದೇಶಗಳಿಗಾಗಿ ವಿನಿಯೋಗಿಸಬಹುದು;
(ಟ) ಕೇಂದ್ರ ಸರ್ಕಾರದ ಮಂಜೂರಾತಿ ಇಲ್ಲದೆ ಸಮಿತಿಯು ಮಾಡಬಹುದಾದ ವೆಚ್ಚಗಳ ಮಿತಿ;
(ಠ) ಸಮಿತಿಯು ಇಡಬೇಕಾದ ಲೆಕ್ಕ ಪತ್ರಗಳು ಮತ್ತು ಅಂಥ ಲೆಕ್ಕಪತ್ರಗಳ ಪರಿಶೋಧನೆ;
(ಡ) ಸಮಿತಿಯ ಆಯವ್ಯಯದ ತಯಾರಿಕೆ, ಸಲ್ಲಿಸುವಿಕೆ ಮತ್ತು ಅನುಮೋದನೆ;
(ಢ) ಸಮಿತಿಯು ಸಲ್ಲಿಸಬೇಕಾದ ವಿವರಪಟ್ಟಿಕೆಗಳು, ವಿವರ ಪತ್ರಗಳು ಮತ್ತು ವರದಿಗಳು;
(ಣ) ನಿಯಮಿಸಬೇಕಾದ, ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ಅನಂತರ ಅದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಅದರ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇರಿಸತಕ್ಕದ್ದು, ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶನವು ಅಥವಾ ಅದಕ್ಕೆ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ತದನಂತರ ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದಲ್ಲ, ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಭಾಧಕವಾಗದಂತೆ ಇರತಕ್ಕದ್ದು.

18. ಉಪವಿಧಿಗಳ ರಚನಾಧಿಕಾರ:— (1) ಈ ಅಧಿನಿಯಮಕ್ಕೆ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳಿಗೆ ಅಸಂಗತವಾಗದಂತೆ ಸಮಿತಿಯು—

(ಕ) ಉಪಾಧ್ಯಕ್ಷರ ಚುನಾವಣಾ ರೀತಿಯನ್ನು ನಿಯಮಿಸಿ;
(ಖ) ಉಪಾಧ್ಯಕ್ಷರ ಪದಾವಧಿಯನ್ನು ಮತ್ತು ಅಧಿಕಾರಗಳನ್ನು ಹಾಗೂ ಕರ್ತವ್ಯಗಳನ್ನು ನಿಯಮಿಸಿ;
(ಗ) ಉಪಾಧ್ಯಕ್ಷನನ್ನು ತೆಗೆದುಹಾಕುವ ಬಗ್ಗೆ ಅಥವಾ ಅವನ ರಾಜೀನಾಮೆಯ ಬಗ್ಗೆ ಮತ್ತು ಉಪಾಧ್ಯಕ್ಷನ ಪದದಲ್ಲಿ ಉಂಟಾದ ಆಕಸ್ಮಿಕ ಖಾಲಿ ಸ್ಥಾನವನ್ನು ತುಂಬುವ ಬಗ್ಗೆ ವಿನಿಯಮಿಸಿ;
(ಘ) ಸಮಿತಿಯ ಸಭೆಗಳನ್ನು ಕರೆಯುವುದನ್ನು ಮತ್ತು ಅದರ ಕಾರ್ಯಕಲಾಪಗಳನ್ನು ನಡೆಸುವುದನ್ನು ವಿನಿಯಮಿಸಿ;
(ಙ) ಇಟ್ಟುಕೊಂಡು ಬರಬೇಕಾದ ರಿಜಿಸ್ಟರುಗಳನ್ನು ಮತ್ತು ದಾಖಲೆಗಳನ್ನು ನಿಯಮಿಸಿ;
(ಚ) ತನ್ನ ನಡವಳಿಕೆಗಳನ್ನು ಮತ್ತು ಯಾತ್ರಿಕರಿಗೆ ಆಸಕ್ತಿ ಇರುವ ಯಾವುದೇ ವಿಷಯವನ್ನು ಪ್ರಕಟಿಸುವುದಕ್ಕಾಗಿ ಉಪಬಂಧಿಸಿ, ಮತ್ತು
(ಛ) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವಶ್ಯವೆಂದು ಸಮಿತಿಯು ಭಾವಿಸುವ ಇತರ ಯಾವುದೇ ವಿಷಯದ ಬಗ್ಗೆ ಉಪಬಂಧಿಸಿ, ಉಪವಿಧಿಗಳನ್ನು ರಚಿಸಬಹುದು.

(2) ಈ ಪ್ರಕರಣದ ಮೇರೆಗೆ ಸಮಿತಿಯು ರಚಿಸಿದ ಉಪವಿಧಿಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಅವುಗಳನ್ನು ಸ್ಥಿರೀಕರಿಸುವವರೆಗೆ ಅವು ಜಾರಿಗೆ ಬರತಕ್ಕದ್ದಲ್ಲ.

(3) ಕೇಂದ್ರ ಸರ್ಕಾರವು ಸ್ಥಿರೀಕರಿಸಿದ ಉಪವಿಧಿಗಳನ್ನು ಸರ್ಕಾರೀ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

19. ನಿರಸನ ಮತ್ತು ಉಳಿಸುವಿಕೆಗಳು:— (1) ಬಂದರು ಹಜ್ ಸಮಿತಿಗಳ ಅಧಿನಿಯಮ, 1932(1932ರ 20) ಈ ಮೂಲಕ ನಿರಸಿತವಾಗಿದೆ.

(2) ಹಾಗೆ ನಿರಸಿತವಾದಾಗ್ಯೂ, ಸದರಿ ಅಧಿನಿಯಮದ ಮೇರೆಗೆ ರಚಿತವಾದ ಮುಂಬಯಿಯ ಬಂದರು ಹಜ್ ಸಮಿತಿಯು, ಈ ಅಧಿನಿಯಮದ ಮೇರೆಗೆ ಸಮಿತಿಯು ರಚಿತವಾಗುವವರೆಗೆ, ಈ ಅಧಿನಿಯಮವನ್ನು ಮಾಡಿರದಿದ್ದರೆ ಹೇಗೋ ಹಾಗೆ, ಕಾರ್ಯನಿರ್ವಹಿಸುವುದನ್ನು ಮುಂದುವರಿಸತಕ್ಕದ್ದು ಮತ್ತು ಹಾಗೆ ಸಮಿತಿಯು ರಚಿತವಾದ ಮೇಲೆ ಮುಂಬಯಿಯ ಬಂದರು ಹಜ್ ಸಮಿತಿಯು ವಿಸರ್ಜಿತವಾಗತಕ್ಕದ್ದು,

The above translation in Kannada of the Haj Committee Act, 1959 (Act No. 51 of 1959) has been authorised by the President to be published in the Official Gazette under clause (a) of section 2 of the Authorised Translation (Central Laws) Act, 1973.

*Secretary to the Government of India*

WD P 5386